ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ  ದಿನಾಂಕ : DATE : 5/11/2019

## ಶಾಸಕರ ಅನರ್ಹತೆ ವಿಚಾರಣೆಗೆ ರೋಚಕ ತಿರುವು

# ಸುಪ್ರೀಂನಲ್ಲಿ ಆಡಿಯೊ ಅಗ್ನಿ ಪರೀಕ್ಷೆ

5/11/19

▪ ವಿಕ ಸುದ್ದಿಲೋಕ ಬೆಂಗಳೂರು

ಹದಿನೇಳನೇ ವಿಧಾನಸಭೆಯಿಂದ ಅನರ್ಹಗೊಂಡಿರುವ 17 ಶಾಸಕರ ಪ್ರಕರಣದ ತೀರ್ಪನ್ನು ಸುಪ್ರೀಂಕೋರ್ಟ್ ಇನ್ನೇನು ಪ್ರಕಟಿಸಬೇಕು ಎಂಬುವಷ್ಟರಲ್ಲಿ ಇಡೀ ಪ್ರಕರಣ ರೋಚಕ ತಿರುವು ಪಡೆದುಕೊಂಡಿದೆ. ಕಳೆದ ಅಕ್ಟೋಬರ್ 26ರಂದು ಹುಬ್ಬಳ್ಳಿಯ ಹೋಟೆಲ್‌ನಲ್ಲಿ ನಡೆದ ಬಿಜೆಪಿ ಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಆಪರೇಶನ್ ಕಮಲದ




ಗುಟ್ಟನ್ನು ರಟ್ಟಾಗಿಸಿದ ಆಡಿಯೋ ಸಿಡಿ ಈಗ ಸುಪ್ರೀಂ ಕೋರ್ಟ್ ಅಂಗಳ ಸೇರಿದೆ. ಅದನ್ನು ಸಾಕ್ಷ್ಯವಾಗಿ ಪರಿಗಣಿಸುವುದಾಗಿ ನ್ಯಾಯಮೂರ್ತಿ ರಮಣ್ ಅವರು ಹೇಳಿರುವುದು ಹಲವರಲ್ಲಿ ಆತಂಕವನ್ನೂ ತಂದಿದೆ.

ಪಕ್ಷಾಂತರ ನಿಷೇಧ ಕಾಯಿದೆಯ ಒಟ್ಟಾರೆ ಆಶಯ, ಅದರೊಳಗಿರುವ ತಾಂತ್ರಿಕ ಕೊರತೆಗಳು, ಅದನ್ನೇ ಲಾಭವಾಗಿಟ್ಟುಕೊಂಡು ತಂತ್ರ ಹೆಣೆಯುವ ಪಕ್ಷಗಳು, ರಾಜಕೀಯ ಸನ್ನಡತೆ, ಪ್ರಜಾತಾಂತ್ರಿಕ ಮೌಲ್ಯದಂತಹ ಸಂಗತಿಗಳನ್ನು ನಿಕಷಕ್ಕೆ ಒಡ್ಡಿರುವ ಈ ಪ್ರಕರಣದ ವಿಚಾರಣೆ ಮತ್ತೊಮ್ಮೆ ಕೌತುಕವನ್ನು ಹೆಚ್ಚಿಸಿದೆ. »04




### ಇಂದು ವಿಚಾರಣೆ

ಅನರ್ಹ ಶಾಸಕರಿಗೆ ಸಂಬಂಧಿಸಿ ಸಿಎಂ ಬಿಎಸ್‌ವೈ ಅವರು ಆಡಿರುವ ಮಾತುಗಳನ್ನು ಒಳಗೊಂಡಿರುವ ಆಡಿಯೊ ವಿಚಾರವನ್ನು ಕಾಂಗ್ರೆಸ್ ಸೋಮವಾರ ಸುಪ್ರೀಂಕೋರ್ಟ್ ಗಮನಕ್ಕೆ ತಂದಿದೆ. ಆಡಿಯೊ ಸಾಕ್ಷ್ಯದ ವಿಚಾರ ನ್ಯಾ. ಎನ್ ವಿ. ರಮಣ್ ನೇತೃತ್ವದ ಪೀಠದ ಮುಂದೆ ವಿಚಾರಣೆಗೆ ಬರಲಿದೆ. ಪುಟ 02

### ಕಾನೂನು ತಜ್ಞರ ಅನಿಸಿಕೆ

ಅನರ್ಹ ಶಾಸಕರು, ರಾಜಕೀಯ ಪಕ್ಷಗಳ ಪರವಾದ ವಕೀಲರ ಅನಿಸಿಕೆ, ಅಭಿಪ್ರಾಯಗಳಿಗಿಂತ, ಪಕ್ಷ ರಾಜಕೀಯದಿಂದ ದೂರವಿರುವ ಕಾನೂನು ತಜ್ಞರ ಅಭಿಪ್ರಾಯಕ್ಕೆ ಸಾರ್ವಜನಿಕವಾಗಿ ಮನ್ನಣೆ ಬಂದಿದೆ. ಅನರ್ಹ ಶಾಸಕರ ಪ್ರಕರಣ ಇತ್ಯರ್ಥ ಮಾಡುವ ಸಂದರ್ಭದಲ್ಲಿ ಪಕ್ಷಾಂತರ ನಿಷೇಧ ಕಾಯಿದೆ ನ್ಯೂನತೆ ಅಥವಾ ಅವಕಾಶಗಳನ್ನು ನೋಡಬಾರದು. ಬದಲಾಗಿ ಪಕ್ಷಾಂತರ ನಿಷೇಧ ಕಾಯಿದೆಯ ಮೂಲ ಆಶಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಒಂದು ಪಕ್ಷದಿಂದ ಆಯ್ಕೆಯಾದ ಶಾಸಕ ಪ್ರಲೋಭನೆಗೆ ಒಳಗಾಗಿ ಅಥವಾ ಬದಲಾದ ಮನಃಸ್ಥಿತಿಯಲ್ಲಿ ವರ್ತಿಸಿ ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸಬಾರದು. ಇದು ಅತ್ಯಂತ ಸರಳವಾಗಿ ನಿರೂಪಿತವಾದ ಕಾಯಿದೆಯ ಮೂಲ ಆಶಯ. ಅನರ್ಹ ಶಾಸಕರ ನಡೆ ಕಾಯಿದೆಯ ಮೂಲ ಆಶಯಕ್ಕೆ ವಿರುದ್ಧವಾಗಿದೆ. ಸಂವಿಧಾನ ಬದ್ಧವಾದ ಯಾವುದೇ ಕಾನೂನು ವರ್ತಮಾನದ ದಿಕ್ಕನ್ನು ನಿರ್ದೇಶನ ಮಾಡದೇ ಇದ್ದಾಗ, ಸಂವಿಧಾನದ ಮೂಲ ಪೀಠಿಕೆ ಅಥವಾ ಆಶಯ ಮೂಲಾಧಾರವಾಗುತ್ತದೆ. ಇಲ್ಲಿ ಅದೇ ಮಾನದಂಡ ಅನ್ವಯವಾಗಬೇಕು.

4